

# ಊಹೆಗೆ ಸಿಗಬಾರದು; ಇದು ದೀಕ್ಷಿತ್ ಹಂಬಲ

‘ದಿಯಾ’ ಸಿನಿಮಾ ಖ್ಯಾತಿಯ ದೀಕ್ಷಿತ್ ಶೆಟ್ಟಿ ಅಭಿನಯಿಸಿರುವ ‘ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ’ ಸಿನಿಮಾ ಈಚೆಗೆ ಬಿಡುಗಡೆಯಾಗಿದೆ. ‘ದಿಯಾ’ ಸಿನಿಮಾದಿಂದ ಕೈ ಹಿಡಿದ ಯಶಸ್ಸಿನೊಂದಿಗೆ ತೆಲುಗು ಸಿನಿಮಾರಂಗದಲ್ಲಿಯೂ ದೀಕ್ಷಿತ್ ಸಖತ್ ಸದ್ದು ಮಾಡುತ್ತಿದ್ದಾರೆ. ಆದರೆ ಕನ್ನಡ ಪ್ರೇಕ್ಷಕರನ್ನು ತಾವಿನ್ನೂ ಪೂರ್ಣಪ್ರಮಾಣದಲ್ಲಿ ತಲುಪಲು ಸಾಧ್ಯವಾಗಿಲ್ಲ ಎಂಬ ಬೇಸರವನ್ನು ಸಂದರ್ಶನವೊಂದರಲ್ಲಿ ಹಂಚಿಕೊಂಡಿದ್ದಾರೆ.

‘ಪ್ರತಿ ಪಾತ್ರದಲ್ಲಿಯೂ ವೈವಿಧ್ಯವನ್ನು ಬಯಸುತ್ತೇನೆ. ನನ್ನಿಂದ ಸಾಧ್ಯವಾದಷ್ಟು ಪ್ರಯತ್ನ, ಶ್ರಮ ಪಟ್ಟು ಆ ಪಾತ್ರವನ್ನು ತುಂಬುತ್ತೇನೆ. ಎಲ್ಲಿ ನನ್ನಿಂದ ತಪ್ಪಾಗಿದೆ ಎಂದು ತಿಳಿಯುತ್ತಿಲ್ಲ. ತೆಲುಗು ಸಿನಿಮಾರಂಗದಲ್ಲಿ ಒಂದು ಮಟ್ಟಕ್ಕೆ ಯಶಸ್ಸು ಸಿಕ್ಕಿತು. ಕನ್ನಡದಲ್ಲಿ ಸಾಧ್ಯವಾಗುತ್ತಿಲ್ಲ. ಕನ್ನಡ ಪ್ರೇಕ್ಷಕರಿಗೆ ನಾನೇಕೆ ಇನ್ನೂ ಒಪ್ಪಿಗೆಯಾಗಿಲ್ಲ ಎಂಬುದಕ್ಕೆ ಕಾರಣ ಹುಡುಕುತ್ತಿದ್ದೇನೆ’ ಎಂದಿದ್ದಾರೆ.

ಇದಕ್ಕೆ ‘ಬ್ಲಿಂಕ್’ ಹಾಗೂ ‘ಕೆಟಿಎಂ’ ಸಿನಿಮಾ ಉದಾಹರಣೆಯನ್ನೂ ನೀಡಿದ್ದಾರೆ. ‘‘ಬ್ಲಿಂಕ್ ಸಿನಿಮಾ ಬೇರೆ ಕಡೆಗಳಲ್ಲಿ ಸೂಪರ್ ಹಿಟ್ ಆಯಿತು. ಕನ್ನಡದಲ್ಲಿ ಅಂಥ ಗೆಲುವು ಸಿಗಲಿಲ್ಲ. ‘ಔಟ್ ಆಫ್ ದಿ ಬಾಕ್ಸ್’ ಸಿನಿಮಾ ಕೊಟ್ಟಾಗ, ಪ್ರೇಕ್ಷಕರನ್ನು ಅದು ತಲುಪುವುದಿಲ್ಲ. ‘ಕೆಟಿಎಂ’ ಸಿನಿಮಾದಲ್ಲಿಯೂ ನನ್ನ ಪಾತ್ರಕ್ಕೆ ನಾಲ್ಕು ಶೇಡ್‌ಗಳಿತ್ತು. ಪಾತ್ರ ಮೆಚ್ಚುಗೆಯನ್ನೇನೋ ಪಡೆಯಿತು. ಆದರೆ ನಿರೀಕ್ಷಿತ ಗೆಲುವು ಅದರಿಂದ ದಕ್ಕಲಿಲ್ಲ’’ ಎಂದಿದ್ದಾರೆ.

ಕಂಟೆಂಟ್ ಜೊತೆಗೆ ಕಮರ್ಷಿಯಲ್ ಆಗಿ ಗೆಲ್ಲುವುದೂ ಮುಖ್ಯ ಎನ್ನುವುದು ದೀಕ್ಷಿತ್ ಅಭಿಪ್ರಾಯ. ‘ಈಗಿನ ಪರಿಸ್ಥಿತಿಯಲ್ಲಿ ಬಾಕ್ಸ್ ಆಫೀಸ್ ಕಲೆಕ್ಷನ್ ತುಂಬಾ ಮುಖ್ಯ. ನಾವು ಮುಂದೆ ಹೋಗಲು, ನಾವು ಬಯಸಿದಂಥ ಸಿನಿಮಾ ಮಾಡಲು ಈ ಗಳಿಕೆ ಮುಖ್ಯ’ ಎಂದು ಹೇಳುತ್ತಾರೆ.

‘ನನ್ನನ್ನು ಜನ ಇಂಥ ಪಾತ್ರಕ್ಕೆಂದು ಸೀಮಿತಗೊಳಿಸಬಾರದು, ಒಂದೇ ಧಾಟಿಯ ಪಾತ್ರದಲ್ಲಿ ಊಹಿಸಬಾರದು, ಒಂದು ಪರಿಪೂರ್ಣ ಕಲಾವಿದನಾಗಬೇಕೆಂದು ಬಯಸುತ್ತೇನೆ. ಪ್ರೇಕ್ಷಕರು ಏಕತಾನತೆಯನ್ನು ಬಯಸುವುದಿಲ್ಲ’ ಎಂದು ವಿವರಿಸಿದ್ದಾರೆ.

ದೀಕ್ಷಿತ್ ಶೆಟ್ಟಿ ಶಿವರಾಜ್‌ಕುಮಾರ್ ಅವರೊಂದಿಗೆ ನಟಿಸುತ್ತಿದ್ದು, ಅವರ ಅಭಿನಯದ ಇನ್ನೊಂದು ಸಿನಿಮಾ ಕೂಡ ಘೋಷಣೆಗೆ ಬಾಕಿಯಿದೆ. ■



# ಪ್ರಿಯಾಂಕ ಪುಳಕ

‘ನಿರ್ದೇಶಕ ಹೇಮಂತ್ ಎಂ. ರಾವ್ ಅವರ ಜೊತೆ ಕೆಲಸ ಮಾಡುವ ಆಸೆ ಇತ್ತು, ಇಷ್ಟು ಬೇಗ ಆ ಆಸೆ ನೆರವೇರುತ್ತದೆ ಎಂದುಕೊಂಡಿರಲಿಲ್ಲ’ ಎಂದು ಬಹುಭಾಷಾ ನಟಿ ಪ್ರಿಯಾಂಕ ಮೋಹನ್ ಸಂತಸ ವ್ಯಕ್ತಪಡಿಸಿದ್ದಾರೆ.

‘666 ಆಪರೇಷನ್ ಡ್ರೀಮ್ ಥಿಯೇಟರ್’ ಮೂಲಕ ಪ್ರಿಯಾಂಕ ಮೋಹನ್ ಕನ್ನಡ ಸಿನಿಮಾರಂಗಕ್ಕೆ ಕಾಲಿಟ್ಟಿದ್ದಾರೆ. ಡಾಲಿಗೆ ಜೋಡಿಯಾಗಿ ಅವರು ಕಾಣಿಸಿಕೊಳ್ಳಲಿದ್ದು, ಶಿವರಾಜ್‌ಕುಮಾರ್ ಅವರ ಸಿನಿಮಾದ ಭಾಗವಾಗಿರುವುದಕ್ಕೂ ಅವರಲ್ಲಿ ಉತ್ಸಾಹ ತುಂಬಿದೆಯಂತೆ.

‘ನಾನು ನಟ ಶಿವರಾಜ್‌ಕುಮಾರ್ ಅವರ ಸಿನಿಮಾಗಳನ್ನು ನೋಡುತ್ತಾ ಬೆಳೆದವಳು. ಅವರ ಸಿನಿಮಾದಲ್ಲಿ ನಟಿಸುವ ಅವಕಾಶ ಸಿಕ್ಕಿರುವುದು ಖುಷಿಯಾಗಿದೆ. ಪ್ರತಿಭಾವಂತರಾದ ನಟ ಧನಂಜಯ, ನಿರ್ದೇಶಕ ಹೇಮಂತ ರಾವ್ ಅವರೊಂದಿಗೆ ಕೆಲಸ ಮಾಡಲು ಬಹಳ ಕುತೂಹಲದಿಂದ ಕಾಯುತ್ತಿದ್ದೇನೆ’ ಎಂದು ಹೇಳಿದ್ದಾರೆ.

ತೆಲುಗಿನಲ್ಲಿ ಪವರ್ ಸ್ಟಾರ್ ಪವನ್ ಕಲ್ಯಾಣ್ ಜೊತೆಗೆ ‘ಓಜಿ’, ನಾನಿ ಜೊತೆಗೆ ‘ಗ್ಯಾಂಗ್ ಲೀಡರ್’, ‘ಸರಿಪೋದಾ ಶನಿವಾರಂ’, ತಮಿಳಿನಲ್ಲಿ ಶಿವಕಾರ್ತಿಕೇಯನ್ ಜೊತೆ ‘ಡಾಕ್ಟರ್’, ಧನುಷ್ ಜೊತೆ ‘ಕ್ಯಾಪ್ಟನ್ ಮಿಲ್ಲರ್’ ಮುಂತಾದ ಚಿತ್ರಗಳಲ್ಲಿ ನಟಿಸಿ ಬಹುಬೇಡಿಕೆ ನಟಿಯಾಗಿರುವ ಪ್ರಿಯಾಂಕ ಇದೀಗ ಕನ್ನಡದಲ್ಲಿ ತಮ್ಮ ಛಾಪು ಮೂಡಿಸಲು ಸಜ್ಜಾಗಿದ್ದಾರೆ. ■